ISSN:3048-7137

# ಆರಯ್

## ಕನ್ನಡ ಇಮ್ಮುಖ ಕುರುಡೋದು (Double Blind) ಮತ್ತು ದಟ್ಟೋದು (Peer Review) ಮೂರು ತಿಂಗಳ ಆನ್ಲಯಿನ್ ಸಂಶೋಧನಾ ಪತ್ರಿಕೆ

ಸಂಪುಟ–೨ ಸಂಚಿಕೆ–೨

ಏಪ್ರಿಲ್-ಜೂನ್ ೨೦೨೫

Kannada Online Double Blind Peer-Review Quarterly Research Journal

Volume-2, Number-2 April-June 2025

ಕಟ್ಟುಗ

**ಬಸವರಾಜ ಕೋಡಗುಂಟಿ**

ಬಂಡಾರ ಪ್ರಕಾಶನ

ಮಸ್ಕಿ

**ಆರಯ್**

ಕನ್ನಡ ಇಮ್ಮುಖ ಕುರುಡೋದು (Double Blind) ಮತ್ತು ದಟ್ಟೋದು (Peer Review) ಮೂರು ತಿಂಗಳ ಆನ್ಲಯಿನ್ ಸಂಶೋಧನಾ ಪತ್ರಿಕೆ

ಸಂಪುಟ–೨, ಸಂಚಿಕೆ–೨, ಏಪ್ರಿಲ್–ಜೂನ್ ೨೦೨೫

ISSN : 3048-7137

**ARAY**

Kannada Online Double Blind Peer-Review Quarterly Research Journal

Volume-2, Number-2, April-June 2025

https://aray.in/

ಪುಟ/Pages : 134

ಹಕ್ಕು/@: ಪ್ರಕಾಶಕರು

ಬೆಲೆ/Price : **ರೂ. 50/–**

ಸಂಪಾದಕ
**ಪ್ರೊ. ಬಸವರಾಜ ಕೋಡಗುಂಟಿ**

ಅತಿಥಿ ಸಂಪಾದಕ
**ಪ್ರೊ. ಕೆ. ಶಾರದಾ**

ಸಲಹಾ ಮಂಡಳಿ
**ಪ್ರೊ. ಪುರುಷೋತ್ತಮ ಬಿಳಿಮಲೆ, ಪ್ರೊ. ನಟರಾಜ್ ಬೂದಾಳ್**
**ಪ್ರೊ. ಸತ್ಯನಾಥ್ ಟಿ.ಎಸ್. ಪ್ರೊ. ಶ್ರೀನಿವಾಸ ವಿ. ಪಾಡಿಗಾರ, ಪ್ರೊ. ಶ್ರೀಧರ್ ಎಸ್.ಎನ್.**

ಸಂಪಾದಕ ಮಂಡಳಿ
**ಪ್ರೊ. ಚೈತ್ರಾ ಪುಟ್ಟಸ್ವಾಮಿ, ಪ್ರೊ. ಮನು ವಿ ದೇವದೇವನ್**
**ಪ್ರೊ. ಗಿಲ್ ಬೆನ್–ಹೆರುತ್, ಪ್ರೊ. ತಾರಕೇಶ್ವರ್ ವಿ.ಬಿ., ಪ್ರೊ. ಪರಮಶಿವಮೂರ್ತಿ ಡಿ.ವಿ.**

ಕಾರ್ಯಕಾರಿ ಮಂಡಳಿ
**ಡಾ. ಮಲ್ಲೇಶಪ್ಪ ಸಿದ್ರಾಂಪುರ, ಡಾ. ರಾಮಕೃಷ್ಣ ಜಿ, ಡಾ. ಮಹಾಂತೇಶ ಪಾಟೀಲ್**
**ಡಾ. ಬಸಯ್ಯ ಸ್ವಾಮಿ, ಡಾ. ಮಧು ಬಿರಾದಾರ್, ಶ್ರೀ ರೇಣುಕಾ ಕೊಡಗುಂಟಿ**

ಪ್ರಕಾಶಕರು

**ಪರಶುರಾಮ ಕೋಡಗುಂಟಿ**
ಪ್ರಕಾಶಕ, ಬಂಡಾರ ಪ್ರಕಾಶನ
ಮಸ್ಕಿ–೫೮೪ ೧೨೪, ಜಿ. ರಾಯಚೂರು
ಕರೆ–೯೧ ೯೮೮೬೪ ೦೭೦೧೧
bandaraprakashana@gmail.com
https://bandaraprakashana.com

# ಪ ರಿ ವಿ ಡಿ


| | |
|---|---|
| ಕಾಲದಲ್ಲಿ ಕಲೆಯ ಬಯಲಿನ ತೆಲುಗು ಬಯಲಾಟ<br>**ಸ.ರಘುನಾಥ** | **4-13** |
| ಜನಪದ ರಂಗಭೂಮಿಯಲ್ಲಿ ಪುರಾಣ ಕಥಾನಕಗಳು: ಮರುಚಿಂತನೆ<br>**ಡಿ.ಎಸ್.ಚೌಗಲೆ** | **14-22** |
| ಬಯಲಾಟಗಳಲ್ಲಿ ಮಹಿಳೆಯರು<br>**ಅನಸೂಯ ಕಾಂಬಳೆ** | **23-37** |
| ಗಡಿನಾಡ ಬಯಲಾಟಗಳಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಅನನ್ಯತೆ<br>**ಅರುಣ್ ಕುಮಾರ್ ಎಂ ಬಿ** | **38-48** |
| ಮಧ್ಯ ಕರ್ನಾಟಕ ಭಾಗದ ಬಯಲಾಟದ ಸ್ವರೂಪ ಮತ್ತು ಬಯಲಾಟದ ನೆಲೆಗಳು<br>**ಚಿಕ್ಕಣ್ಣ ಯಣ್ಣೆಕಟ್ಟೆ** | **49-87** |
| ಚಕ್ರಬಿಂಬ ಕೋಟೆ: ಒಂದು ಪಾಠ್ಯಿಕ ವಿಶ್ಲೇಷಣೆ<br>**ಡಾ. ಮುನಿರಾಜ ಎ.** | **88-98** |
| ನನ್ನೂರಿನ ನಾಟಕರಂಗ<br>**ಹುಚ್ಚೇಗೌಡ ಎಚ್.** | **99-113** |
| ಆನೇಕಲ್ ತಾಲ್ಲೂಕಿನ ಕೇಳಿಕೆಗಳು<br>**ಕೆ. ಮುನಿಯಪ್ಪ** | **114-121** |
| ಹೆಣ್ಣನ್ನು ಕಟಕಟೆಯಲ್ಲಿ ನಿಲ್ಲಿಸುವ ಚಿತ್ರಪಟ ರಾಮಾಯಣ<br>**ಶ್ವೇತ ಜೆ.** | **122-130** |

ISSN : 3048-7137

# ಚಕ್ರಬಿಂಬ ಕೋಟೆ: ಒಂದು ಪಾಠ್ಯಿಕ ವಿಶ್ಲೇಷಣೆ

ಡಾ. ಮುನಿರಾಜ ಎ.

**ಸೂಚಕ ಪದಗಳು**

ಚಕ್ರಬಿಂಬ ಕೋಟೆ, ವೀರಅಭಿಮನ್ಯು ಕಾಳಗ, ಬಯಲಾಟ, ಜಾನಪದ

ಚಕ್ರಬಿಂಬ ಕೋಟೆ ಅಥವಾ ವೀರಅಭಿಮನ್ಯು ಕಾಳಗವು ಉತ್ತರ ಕರ್ನಾಟಕದ ಜನಪದ ಬಯಲಾಟಗಳಲ್ಲಿ ಪ್ರಸಿದ್ಧವಾಗಿರುವ ದೃಶ್ಯಕಾವ್ಯವಾಗಿದೆ. ಈ ಬಯಲಾಟವು ಪೌರಾಣಿಕ ಮಹಾಭಾರತ ಕಥಾವಸ್ತುವಿನ ಮೇಲೆ ಆಧಾರಿತವಾಗಿದ್ದು, ಚಕ್ರಬಿಂಬ ಕೋಟೆಯನ್ನು ತೋರುವ ಅಭಿಮನ್ಯುವಿನ ಶೌರ್ಯ, ಪರಾಕ್ರಮ ಮತ್ತು ಹದಿನಾಲ್ಕು ವರ್ಷದ ವಯಸ್ಸಿನ ವೀರನ ಸಾಹಸವನ್ನು ಒಳಗೊಂಡಿದೆ. ಹಸ್ತಪ್ರತಿಗಳಲ್ಲಿ ಪಾತ್ರ ಪರಿಚಯ, ನಾಮಾಂಕಿತ ಮಾತು, ಸಭಾ ಮಾತು, ಮಧ್ಯನಾಡಿನ ಪದಗಳು, ಪ್ರಾಸ, ಗಾದೆ, ಹ್ರಸ್ವ–ದೀರ್ಘಾಕ್ಷರ ವ್ಯತ್ಯಾಸ, ಸಂಸ್ಕೃತ ಪ್ರಭಾವದ ಪದಗಳು ಮತ್ತು ಪ್ರಾದೇಶಿಕ ಭಾಷಾಭಿನ್ನತೆಗಳ ಮೂಲಕ ಕಥೆಯ ಸರಾಗ ನಿರ್ವಹಣೆಯನ್ನು ಗಮನಿಸಬಹುದು. ಬಯಲಾಟದಲ್ಲಿ ಸಾರ್ವಜನಿಕ ಮನರಂಜನೆ, ಸಮುದಾಯದ ಆಂತರಿಕ ಸಂಸ್ಕೃತಿಯ ಪ್ರಸಾರ ಮತ್ತು ದೃಶ್ಯಕಾವ್ಯ ಪರಂಪರೆಯ ನೈಜತೆಯನ್ನು ಸಮರ್ಥವಾಗಿ ತೋರಿಸಲಾಗಿದೆ. ಇಂದಿಗೂ ಈ ಬಯಲಾಟಗಳು ಜೀವಂತವಾಗಿದ್ದು, ಜನರ ಬದುಕಿನ ಸಂಗತಿಗಳೊಂದಿಗೆ ಬೇರೆಯಾಗದ ಭಾವವನ್ನು ಒದಗಿಸುತ್ತವೆ.

## ಪೀಠಿಕೆ:

ಸರಳ ರೇಖೆಯಂತೆ ಸಾಗದ ಬದುಕಿನಲ್ಲಿ ಏಳುಬೀಳುಗಳು ಸಹಜ. ಇಂತೀ ಕಷ್ಟನಷ್ಟಗಳ ನಡುವೆ ಮನಸ್ಸನ್ನು ಮತ್ತೆ ಮತ್ತೆ ಉಲ್ಲಸಿತಗೊಳಿಸಬೇಕಾದುದು ಜಗದ ನಿಯಮ. ಇಲ್ಲಿನ ಬಾಳುವೆಗಾಗಿ ದುಃಖವನ್ನು ಮರೆಯಲು ಸುಖವನ್ನು, ಸಂತೋಷವನ್ನು ಸೃಷ್ಟಿಸಿಕೊಳ್ಳಬೇಕಾದುದು ಅನಿವಾರ್ಯ. ಮನುಷ್ಯ ಜೀವನದ ಇಂತಹ ಸಂದರ್ಭಗಳಿಗೆ ಆಧಾರವಾದವುಗಳು ಕಥೆ, ಹಾಡು, ನಾಟಕ, ಲಾವಣಿ, ಕೇಳಿಕೆ, ಒಡಪು ಮುಂತಾದವು. ಮನರಂಜನಾ ಮಾಧ್ಯಮಗಳಿಲ್ಲದ ಜನಪದರು ತಮ್ಮಲ್ಲಿಯೇ ಲಭ್ಯವಿದ್ದ ಪರಿಕರಗಳನ್ನು ಬಳಸಿ, ನಿತ್ಯಜೀವನದ ಘಟನೆಗಳಿಗೆ ಬಣ್ಣ ಹಚ್ಚಿ, ಈ ಎಲ್ಲರನ್ನು ರಂಜಿಸಿ ಕುಣಿಯುತ್ತಿದ್ದುದು ಸಾಮಾನ್ಯ. ಈ ತೆರನಾದ ಮನರಂಜನೆಯ ಮಾಧ್ಯಮಗಳಲ್ಲಿ ಬಯಲಾಟಗಳೂ ಒಂದು ವಿಧ. ತಮಗೆ ತಿಳಿದಿರುವ ಯಾವುದೋ ಒಂದು ಕಥೆಯನ್ನು ಆಧರಿಸಿ, ಪಾತ್ರಗಳನ್ನು ಮಾಡಿ ಸಂತೋಷಿಸುವ ಇದು ಒಂದು ಕಲಾಪ್ರಕಾರ. ಇದರ ಹುಟ್ಟು, ಬೆಳವಣಿಗೆಯ ಬಗ್ಗೆ ಅನೇಕ ಸಂಶೋಧನೆಗಳು ಈಗಾಗಲೇ ನಡೆದಿವೆ. ಇಂದಿಗೂ ಸಹ ಉತ್ತರ ಕರ್ನಾಟಕದಲ್ಲಿ ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತವೆ ಈ ಬಯಲಾಟಗಳು. ಹೆಚ್ಚಿನದಾಗಿ ಪೌರಾಣಿಕ ಕಥಾ ವಸ್ತುಗಳನ್ನೇ ಹೊಂದಿರುವ ಈ ಬಯಲಾಟಗಳು ಅಲ್ಪ ಸ್ವಲ್ಪ ವ್ಯತ್ಯಾಸಗಳೊಂದಿಗೆ ಮೂಲವನ್ನು ಇನ್ನೂ ಉಳಿಸಿಕೊಂಡಿವೆ. 'ಬಯಲಾಟಗಳು' ಇವುಗಳ ಹೆಸರೇ ತಿಳಿಸುವಂತೆ ಬಯಲಿನಲ್ಲಿ ಆಡುವ ಆಟ ಅಥವಾ ದೃಶ್ಯಕಲೆ. ಊರಿನ ಅಥವಾ ಊರ ಹೊರಗಿನ ಎತ್ತರವಾದ ಒಂದು ಸ್ಥಳದಲ್ಲಿ, ನೋಡುಗರಿಗೆ ಅನುಕೂಲವಾಗುವ ವಿಶಾಲ ಬಯಲಿರುವಂತೆ ಏರ್ಪಾಟು ಮಾಡಿ ಒಂದು ಕಥಾವಸ್ತುವನ್ನು ಆಧರಿಸಿ ಅಭಿನಯಿಸುವುದು ಬಯಲಾಟ. ಈ ಎತ್ತರವಾದ ಸ್ಥಳವು ನೈಸರ್ಗಿಕವಾಗಿರಬಹುದು ಅಥವಾ ಮಾನವ ನಿರ್ಮಿತವಾಗಬಹುದು. ಬಯಲಾಟಗಳಲ್ಲಿ ಆಧುನಿಕತೆ ತಲೆದೋರಿದಂತೆ ಹಲಗೆಗಳಿಂದ ರಂಗಮಂಟಪವನ್ನು ಕಟ್ಟುವುದು, ಆ ಹಲಗೆಗಳನ್ನು ಮುರಿಯುವುದರೊಂದಿಗೆ ತಮ್ಮ ಶೌರ್ಯವನ್ನು ಪ್ರದರ್ಶಿಸುವುದು ಕಾಣುತ್ತಾ ಬಂತು. ಹಾಗೆಯೇ ಇದರಲ್ಲಿ ಕಾಲಕ್ರಮೇಣ ಪ್ರಾದೇಶಿಕ ಭಿನ್ನತೆಗಳಿಂದಾಗಿ ವಿಭಾಗಗಳೂ ಏರ್ಪಟ್ಟವು. ಇಂತಹ ಬಯಲಾಟಗಳಲ್ಲಿ ಸುಪ್ರಸಿದ್ಧವಾದ ಚಕ್ರಬಿಂಬ ಕೋಟೆ ಅಥವಾ ಅಭಿಮನ್ಯು ಕಾಳಗ ಎಂಬ ಬಯಲಾಟದ ಪಠ್ಯದ ಬಗೆಗೆ ಈ ಲೇಖನದಲ್ಲಿ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಾಗಿದೆ.

## ವಿಷಯದ ವಿಶ್ಲೇಷಣೆ

ವೀರ ಅಭಿಮನ್ಯು ಕಾಳಗ ಎಂದರೆ ಒಡನೆಯೇ ಬಹುಜನರಿಗೆ ಮನೆಗೆ ಬರುವ

ISSN : 3048-7137

ಸಂದರ್ಭದ ಇನ್ನೊಂದು ಹೆಸರೇ ಚಕ್ರಬಿಂಬಕೋಟೆ. ದ್ರೋಣಾಚಾರ್ಯರು ಪಾಂಡವರ ವಿರುದ್ಧವಾಗಿ ರಚಿಸಿದ ಒಂದು ರಣತಂತ್ರ. ಇದನ್ನು ಸಲು ಅತಿರಥ ಮಹಾರಥದಿಂದ ಮಾತ್ರ ಸಾಧ್ಯ ಎನ್ನುವ ನುಡಿಯೊಂದು ಆಗಿರ ಕಾಲದಲ್ಲಿ ಪ್ರಚಲಿತದಲ್ಲಿತ್ತು. ಇಂತಹ ಅಭೇದ್ಯವಾದ ಕೋಟೆಯನ್ನು ಬೇಧಿಸಲು ಹದಿನಾಲ್ಕು ವರ್ಷ ವಯಸ್ಸಿನ ಅಭಿಮನ್ಯು ಮುಂದಾಗುವುದು, ಅಲ್ಲಿ ತನ್ನ ಶೌರ್ಯವನ್ನು ಮೆರೆಯುವುದು, ಕೊನೆಗೆ ಮೋಸದಿಂದ ಹತನಾಗುವುದು ಈ ಬಯಲಾಟದ ಕಥೆ. ಇಲ್ಲಿ ನಾನು ಬಳಸಿರುವ ಕಾಗದದ ಹಸ್ತಪ್ರತಿಯು ಚಿತ್ರದುರ್ಗ ಜಿಲ್ಲೆಯ ತಳುಕಿನ ದೊಡ್ಡ ಸುಬ್ಬಣ್ಣನವರು ರಚಿಸಿದುದೆಂದು ಈ ಪ್ರತಿಯಿಂದ ತಿಳಿದುಬರುತ್ತದೆ. ಈ ಕಥೆಯನ್ನು ಇದೇ ತಳುಕಿನ ಟಿ.ಜಿ. ವೀರಣ್ಣ ಎಂಬುವರು 1998ರಲ್ಲಿ ಪ್ರತಿ ಮಾಡಿಕೊಂಡಂತೆ ಬರೆದಿರುವರು ಮತ್ತು ಈ ಪ್ರತಿಯಕೊನೆಯಲ್ಲಿ ಕೆ.ಟಿ. ಪಾಲಯ್ಯ, ತಳುಕು ಚಳ್ಳಕೆರೆ ಎಂದು ಬರೆದಿದ್ದು ಅದರ ಕೆಳಗೆ ಬಳ್ಳಾರಿ ಜಿಲ್ಲೆಯ, ಸೊಂಡೂರು ತಾಲ್ಲೂಕಿನ ಮಲೆ ತುಂಬರಗುಡ್ಡೆ, ಪಾಪಣ್ಣ ಪೂಜಾರಿ ಎಂದು ಬರೆದಿರುವ ಕಾರಣ ಪ್ರಾಯಶಃ ಈ ಪ್ರತಿಯನ್ನು ಬರೆದುಕೊಂಡಿರುವವರು ಇವರೇ ಎನಿಸುತ್ತದೆ. ಹಾಗೆ ನೋಡಿದರೆ ಈ ಕೊನೆಯ ಪುಟದಲ್ಲಿ ಟಿ.ಜಿ. ವೀರಣ್ಣ ವಿರಚಿತ ಎಂದು ಬರೆದಿದೆ. ಅಂದರೆ ಯಾರ ಬಳಿಯಲ್ಲಿ ಪ್ರತಿಯನ್ನು ಪಡೆದಿರುತ್ತಾರೋ ಅವರನ್ನೇ ಲೇಖಕರಂತೆ ಭಾವಿಸಿದಂತಿದೆ. ಇದರಿಂದ ಮೊದಲ ಪುಟದಲ್ಲಿ ಬರೆದಿರುವ ದೊಡ್ಡ ಸುಬ್ಬಣ್ಣ ವಿರಚಿತ ಎಂಬುದೂ ಸಹ ರಚಯಿತರದೋ ಅಥವಾ ಪ್ರತಿಕಾರರ ಹೆಸರೋ ಅನುಮಾನ ಹುಟ್ಟಿಸುತ್ತದೆ. ಈ ಬಯಲಾಟದ ಪ್ರತಿಯಲ್ಲಿ ಒಟ್ಟು ಹದಿನೈದು ಪಾತ್ರಗಳು ಬರುತ್ತವೆ. ಗೋಪಾಲ, ಕೌರವ, ಕರ್ಣ, ದ್ರೋಣಾಚಾರಿ, ಸೈಂಧವ, ಧರ್ಮರಾಯ, ಭೀಮ, ಅಭಿಮನ್ಯು, ಕೃಷ್ಣ, ಲಕ್ಷಣ, ಅಶ್ವತ್ಥಾಮ, ಸುಭದ್ರೆ, ಉತ್ತರೆ, ಕನಕಾಂಗಿ.ಇಲ್ಲಿ ಗೋಪಾಲನು ಆಟದ ಆರಂಭದಲ್ಲಿ ಮೊದಲಿಗೆ ಕಾಣಿಸಿಕೊಂಡು ಆಟವು ಯಾವುದೇ ಅಡೆತಡೆಗಳಿಲ್ಲದೆ ನೆಮ್ಮದಿಯಾಗಿ ನಡೆಯಲೆಂದು ಹಾರೈಸಿ, ವರವನ್ನು ಕೊಟ್ಟು ಹೋಗುವ ಮೂಲಕ ಗೋಪಾಲನ ಪಾತ್ರ ಮಾಯವಾಗುತ್ತದೆ. ಇನ್ನು ಪ್ರತಿಯೊಂದು ಪಾತ್ರಗಳನ್ನು ಪರಿಚಯಿಸುವ ಕೆಲಸ ಸಾರಥಿಯದು. ರಂಗಮಂಟಪಕ್ಕೆ ಬರುವ ಪ್ರತಿಯೊಬ್ಬರೂ ಸಾರಥಿಯೊಡನೆ ಮಾತನಾಡಿಯೇ ಮುಂದುವರೆಯುವುದು ಇಲ್ಲಿ ಕಂಡುಬರುತ್ತದೆ. ರಂಗಕ್ಕೆ ಬರುವ ಪಾತ್ರಗಳು ಸಾರಥಿಯು ಕೇಳುವ ಪ್ರಶ್ನೆಗೆ ಹೇಳುವ ಉತ್ತರವು 'ನಾಮಾಂಕಿತದ ಮಾತು' ಎಂದು ಕರೆಯಲ್ಪಡುತ್ತದೆ. ಅಂದರೆ ರಂಗಕ್ಕೆ ಬಂದಿರುವ ವ್ಯಕ್ತಿ ತನ್ನಇತಿವೃತ್ತವನ್ನು ಪರಿಚಯಿಸಿಕೊಳ್ಳುವುದರಿಂದ ಅದಕ್ಕೆ ಹೀಗೆ ಕರೆಯಲಾಗಿದೆ. ಅದೇ ವ್ಯಕ್ತಿ ತಾನು ಬಂದಕಾರ್ಯವನ್ನು ತಿಳಿಸುವ ವಾಕ್ಯ ವೃಂದಕ್ಕೆ 'ಸಭಾಮಾತು' ಎಂದು ಕರೆಯಲಾಗಿದೆ. ಅಂದರೆ ಈ ಮೂಲಕ ಸಭೆಗೆ ತನ್ನ ನಾಮ, ಹಿನ್ನೆಲೆ

ಹಾಗೂ ಬಂದ ಕಾರಣವನ್ನು ನೋಡುಗರಿಗೆ ಸ್ಪಷ್ಟಪಡಿಸುವ, ಆ ಮೂಲಕ ಕಥೆಯ ಸರಾಗ ಮುನ್ನಡೆಯುವಿಕೆ ಮತ್ತು ಒಂದು ದೃಶ್ಯದಿಂದ ಇನ್ನೊಂದು ದೃಶ್ಯಕ್ಕೆ ಇರುವ ಸಂಬಂಧ, ಒಂದು ಪಾತ್ರದಿಂದ ಇನ್ನೊಂದು ಪಾತ್ರಕ್ಕೆ ಇರುವ ಸಂಬಂಧವು ಗೊಂದಲವಿಲ್ಲದೆ ಎಲ್ಲರಿಗೂ ಅರ್ಥವಾಗುವಂತೆ ಮಾಡುವುದೇ ಇದರ ಉದ್ದೇಶವಾಗಿದೆ. ಇಲ್ಲಿ ಪ್ರತಿಯೊಂದು ಪಾತ್ರದ ಮೊದಲ ಪ್ರವೇಶಕ್ಕೆ 'ಪೀಠಿಕೆ' ಎಂದು ಕರೆಯುತ್ತಾರೆ. ಅದನ್ನೇ ಸಾರತಿಯ ಪ್ರಶ್ನೆ ಎಂತಲೂ ತಿಳಿಯಬಹುದು. ವಿಚಿತ್ರವೆಂದರೆ ಆಯಾ ಪಾತ್ರಗಳಿಗೆ ಒಪ್ಪುವ ಶೌರ್ಯ ಪರಾಕ್ರಮಗಳನ್ನು ಸಾರಥಿಯೇ ಹೇಳಿ ಕೊನೆಯಲ್ಲಿ ನಿನ್ನ ನಾಮಾಂಕಿತವೇನು? ಎಂದು ಕೇಳುವ ಮೂಲಕ ಆ ಪಾತ್ರದ ಮಾತುಗಾರಿಕೆಗೆ ಅವಕಾಶ ಕಲ್ಪಿಸುತ್ತಾನೆ. ಹೀಗೆ ಮೊದಲಿಗೆ ಪೀಠಿಕೆ ನಂತರ ನಾಮಾಂಕಿತ ಮಾತು ಆನಂತರ ಸಭಾ ಮಾತು ಇವು ಮೂರೂ ಹಂತಗಳೂ ಪ್ರತಿಯೊಂದು ಪಾತ್ರಕ್ಕೂ ಕಡ್ಡಾಯವೆಂಬಂತೆ ಈ ಹಸ್ತಪ್ರತಿಯಲ್ಲಿ ಕಂಡುಬರುತ್ತದೆ. ಈ ಮೂರು ಹಂತಗಳ ನಂತರಯಾವ ಪಾತ್ರವುಯಾವ ಪಾತ್ರದ ಮುಂದೆ ಮಾತನಾಡುತ್ತದೆ ಎಂಬ ಸೂಚನೆ ಇರುತ್ತದೆ. ತದನಂತರ ಕೆಲವು ಪಾತ್ರಗಳಿಗೆ ನಡುನಡುವೆ 'ಪದ' ಎಂದರೆ ಹಾಡು ಬಂದು ಮತ್ತೆ ಮಾತು ಬರುತ್ತದೆ. ಆ ಪಾತ್ರದ ಎದುರಿನ ಪಾತ್ರವೂ ಇದಕ್ಕೆ ಪದ ನಂತರ ಮಾತಿನ ಮೂಲಕ ಪ್ರತ್ಯುತ್ತರ ನೀಡುವ ಪರಿಪಾಠವು ಕಂಡುಬರುತ್ತದೆ. ಆದರೆ ಇಡೀ ನಾಟಕದಲ್ಲಿ ಎಲ್ಲಿಯೂ ಸಂಗೀತದ ಬಗ್ಗೆಯಾಗಲಿ, ರಾಗಗಳ ಬಗ್ಗೆಯಾಗಲಿ, ತಾಳಗಳ ಹೆಸರಿನ ಬಗ್ಗೆಯಾಗಲಿ ಪ್ರಸ್ತಾಪ ಬರುವುದಿಲ್ಲ. ಕೆಲವು ಕಡೆಗಳಲ್ಲಿ ಮಾತ್ರ 'ಇಲ್ಲಿ ತಾಳ ಹಿಡಿಯಬೇಕು' ಎನ್ನುವ ವಾಕ್ಯವು ಹಿನ್ನೆಲೆ ಸೂಚನೆಯಂತೆ ಕಂಡುಬರುತ್ತದೆ.

ಹಾಗೆಯೇ ಪ್ರತಿಯೊಂದು ಪಾತ್ರದ ಮಾತಿನ ಆರಂಭದಲ್ಲಿ 'ಭಲಲಲ' ಅಥವಾ 'ಭಲೇ' ಎನ್ನುವ ಪದವು ಕಡ್ಡಾಯವೆಂಬಂತೆ ಕಂಡುಬಂದರೂ? ಮಾತಿನಕೊನೆಯಲ್ಲಿ ಪ್ರಾಸಗಳೂ ಕೂಡ ಸಹಜವೆಂಬಂತೆ ಕಾಣುತ್ತವೆ. ಈ ಪ್ರಾಸಗಳಲ್ಲಿ ಪಾತ್ರಗಳು ಮತ್ತು ಸಂದರ್ಭಗಳಿಗೆ ತಕ್ಕಂತೆ ಪ್ರಾಸಗಳು ರೂಪುಗೊಂಡು ಪ್ರತಿಯೊಂದು ಸಲಕ್ಕೂ ಹೊಸಹೊಸ ಪ್ರಾಸಗಳು ಕಂಡುಬರುತ್ತವೆ. ಒಂದೇ ಪ್ರಾಸ ಅಥವಾ ಪ್ರಾಸದಲ್ಲಿನ ಪದಗಳು ಪುನರಾವರ್ತಿತವಾಗಿರುವುದು ಅತಿವಿರಳ. ಈ ಹಸ್ತಪ್ರತಿಯಲ್ಲಿ ಕಂಡುಬರುವ ಕೆಲವು ಪ್ರಾಸಗಳು ಹೀಗಿವೆ.

1. ನೀನು ಧಾರ್ಯೆ ಸೇವಕ ಭಯತೃಣ ಭಾವಕ
2. ಸಾರಥಿ ಎಂಬ ಜಾಣತೆಗೆಯುವೆನೊಅರ್ಜುನನ ಪ್ರಾಣ
3. ರಾಜರವಿಕೋಟಿತೇಜ/ರಾಜ ಆಶ್ರಿತ ಅಲ್ಪಭೋಜ

4. ಪೇಳ್ವೆಚಾರನೆ ಆಗ್ನ್ಯಾದಾರನೆ
5. ವೈರಿಯೇರಾಮ ಶೀಗ್ರದಿ ಕೊಡು ನೇಮ ಆಗ್ರಹಿಸಿ ಬರುವ ನಿಸ್ಸಿಮಾ
6. ಧರ್ಮನಂದನ ಮಾಡುವೆನು ವಂದನ
7. ದಾರಿಯಂಬಿಟ್ಟುದೂರಕ್ಕೆ ಸಾರಲ್ಕೈ ಬಂಡ ಮುರಿಯುವೆ ನಿನ್ನ ಮಂಡ
8. ನೋಡೋ ಭ್ರಷ್ಟ ಪರಮ ಪಾಪಿಷ್ಟ
9. ಕಂಕರ ಶತ್ರು ಭಯಂಕರ
10. ಜನಕಚಂದ್ರಕಕುಲ ತಿಲಕ
11. ಬಾಲ ಸದ್ಗುಣ ವಿಶಾಲ
12. ಮಾತೆ ಲೋಕ ವಿಖ್ಯಾತೆ/ಮಾತೆ ಸುಜನ ಸುಪ್ರೀತೆ
13. ಪ್ರಾಣನಾಯಕ ಸೌಭಾಗ್ಯದಾಯಕ
14. ಕಾಂತೆ ಬಿಡುಮನದಚಿಂತೆ
15. ಭಾಮಿನಿ ಮದಗಜ ಕಾಮಿನಿ
16. ನಾರಿ ಮದನಕಟಾರಿ
17. ಮಿತ್ರರೆ ಸದಮಲ ಚರಿತ್ರರೆ/ಮಿತ್ರರೆ ಪರಮ ಪವಿತ್ರರೆ
18. ಜಯದ್ರತದುರ್ಮಾರ್ಗನಿರತ
19. ದ್ರೋಣ ಕಾಳಗದೊಳತಿ ಜಾಣ
20. ಲಕ್ಷಣ ಸಂಹಾರ ಮಾಡುವೆ ಈ ಕ್ಷಣ
21. ಪಾರ್ಥಕುಮಾರ ಸಂಗ್ರಾಮಧೀರ
22. ಬೇಡವೋಕಂದ ಸಾಗದು ನಿನ್ನಿಂದ
23. ಸ್ವಾಮಿಗುರುಕುಲ ಪ್ರೇಮಿ/ಸ್ವಾಮಿ ಶಿಕ್ಷಜನ ಪ್ರೇಮಿ
24. ಭೂಪ ಶಶಿಕುಲ ದೀಪ
25. ಕಿಂಕರರಿಪುಜನ ಭಯಂಕರ
26. ಪಾರ್ಥಚಿಂತಿಸುವುದು ವ್ಯರ್ಥ / ಪಾರ್ಥ ನೀನತಿ ಸಮರ್ಥ
27. ರಮಣಿ ಸದ್ಗುಣ ಭರಣಿ
28. ಕೌರವೇಂದ್ರ ಸದ್ಗುಣ ಸಾಂದ್ರ

ಈ ರೀತಿಯಾಗಿ ಕಿವಿಗೆ ಇಂಪಾಗಿ ಕೇಳ ಸಿಗುವ ಅನೇಕ ಪ್ರಾಸಗಳು ಇಲ್ಲಿ ಕಂಡುಬರುತ್ತವೆ. ಅಲ್ಲದೆ ಈ ಹಸ್ತಪ್ರತಿಯಲ್ಲಿ ಅಲ್ಪಪ್ರಾಣ, ಮಹಾಪ್ರಾಣಗಳ ವ್ಯತ್ಯಾಸಗಳನ್ನು ಪರಿಗಣಿಸದೆಯೇ ಬರೆದಿರುವ ಅನೇಕ ಪದಗಳನ್ನು ಕಾಣುತ್ತೇವೆ.

1. ಬೀಕರದ್ವನಿ
2. ಆದಾರ ನಾದ
3. ದುರೀಣದಾತ್ರಿ
4. ಸಾರತಿ
5. ಸಾದ್ಯಾವಾಗದಂತೆ
6. ದರ್ಮಜ
7. ಚಕ್ರಬಿಂಭದ
8. ಸಿಂದುದೇಶ
9. ಬದ್ರ
10. ಸಂದರ್ಬ
11. ಭಂದಕಾರಣ
12. ಶೀಗ್ರದಿಂ
13. ಲಿಕಿತ
14. ಸಾರ್ತಕ
15. ವಿಕ್ಯಾತರಾದ

ಇದಲ್ಲದೆ ಹ್ರಸ್ವ ಮತ್ತು ದೀರ್ಘಾಕ್ಷರಗಳ ವ್ಯತ್ಯಾಸವಿಲ್ಲದೆಯೂ ಬರೆದಿರುವ ಹಲವಾರು ಪದಗಳು ಸಿಗುತ್ತವೆ.

1. ಸಹಸಿಗಳಾದ
2. ಗುರುವಾರ್ಯರೇ
3. ಮಹನುಭವನಾದ
4. ಅಸೀರ್ವದಿಸಿ
5. ಬ್ರಹ್ಮಣ
6. ಸ್ವನನಂತೆ
7. ಧುಕ
8. ನೇತ್ರಗ್ನಿ
9. ವಿಕ್ಯತರಾದ
10. ಭುಕಾಂತರಿಗೆ
11. ಸಾರ್ತಕವೇನು
12. ಸಹಾಸವಂ
13. ಮಣಿಕ್ಯದಂತೆ

ಇದರಂತೆಯೇ 'ಶ'ಕಾರ 'ಸ'ಕಾರಗಳ ವೈವಿಧ್ಯತೆಯನ್ನೂ ಕಾಣಬಹುದು.

1. ಸಿಕಾಗ್ರದೋಳ್
2. ಜಯಸೀಲನಾದ
3. ಸೀಗ್ರದಲ್ಲಿ
4. ಸ್ವಾನನಂತೆ
5. ಜೈಸಿಲರಾದ
6. ಸಿಸ್ತಿನಿಂದ
7. ಕಾಸ್ಮಿರ

ಹಾಗೆಯೇ 'ಹ' ಕಾರ ಮತ್ತು 'ಇ' ಕಾರಗಳ ವ್ಯತ್ಯಯ

1. ಇಗಿರುವಲ್ಲಿ
2. ಕಳುಇಸಲಾರೆನಪ್ಪ
3. ಇಮ್ಮೆಟ್ಟುವರು
4. ಊಇಸಲಾಗದ್ಯೆ

5. ಹಿಂತದನ್ನು

'ಉ' ಕಾರ 'ವು' ಕಾರ ವ್ಯತ್ಯಯ

1. ವುತ್ತರಕ್ಕೆ
2. ವುದ್ಗರಿಸಿ
3. ವುದ್ಧಟತನವನ್ನು

'ಇ' ಕಾರ 'ಯಿ'ಕಾರ ವ್ಯತ್ಯಯ

1. ಯಿನ್ನೆಂತು
2. ಯಿವರು
3. ಯಿದರ
4. ಯಿಂದಿನ
5. ಯಿಂದಿರಾಪತಿ

ಎ, ಏ ಕಾರ ಮತ್ತು ಹ ಕಾರಗಳ ವ್ಯತ್ಯಯ

1. ಮೇಲಕ್ಕೆ ಹೇಳು
2. ಹೇನು ಹೇಳಲ್ಲೈ
3. ಹೇನೆಂದು

'ಅ' ಕಾರ 'ಹ' ಕಾರ ವ್ಯತ್ಯಯ

1. ಅಸ್ತಿನಾಪುರ
2. ಅಸ್ತದೋಳ್
3. ಅಂಬಲಿಸಬೇಡ
4. ಅಗರಣವಾಯಿತೆ

'ಣ'ಕಾರ 'ನ' ಕಾರ ವ್ಯತ್ಯಯ

1. ಕರ್ನ

'ವ' ಕಾರ 'ಒ' ಕಾರ ವ್ಯತ್ಯಯ

1. ವದ್ದೋಡಿಸಲಿಲ್ಲವೆ
2. ವಪ್ಪತಕ್ಕದಾದರಿಂದ

3. ವಪ್ಪಿಸುತ್ತೇನೆ

4. ನಿನಗೆ ವಲಿಯಲಿ

'ಒ'ತ್ತಕ್ಷರ – ಬಿಂದು ವ್ಯತ್ಯಯ

1. ಯನಂಬರಹೇಳಿ

'ಈ' ಕಾರ 'ಹ' ಕಾರ ವ್ಯತ್ಯಯ

1. ಮತಿಈನನಾದ

'ಈ' ಕಾರ 'ಯ'ಕಾರ ವ್ಯತ್ಯಯ

1. ಯೀಧರೆಯೋಳ್

'ಎ' ಕಾರ 'ಯ'ಕಾರ ವ್ಯತ್ಯಯ

1. ಯನ್ಯ

2. ಯಂತ

3. ಯನ್ನಡಿಗಳಿಗೆ

4 ಯಲ್ಲಿಗೆ

'ಋ' ಕಾರ ವ್ಯತ್ಯಯ

1. ರುಕೋದರ

2. ದುತರಾಷ್ಟ್ರ

ಇಷ್ಟೇ ಅಲ್ಲದೆ ಇಲ್ಲಿ ಇನ್ನೂ ಕೆಲವು ಪದಗಳನ್ನು ಬರವಣಿಗೆಯ ಸಾಮಾನ್ಯ ರೂಪಕ್ಕಿಂತ ಭಿನ್ನವಾಗಿ ಬರೆದಿರುವುದುಕಂಡುಬರುತ್ತದೆ.

1. ಘ್ನನ – ಜ್ಞಾನ

2. ಘ್ನಪಕ – ಜ್ಞಾಪಕ

3. ಅಂತಕ್‌ಪುರಕ್ಕೆ – ಅಂತಃಪುರಕ್ಕೆ

4. ಭ್ರಹಂಮನು – ಬ್ರಾಹ್ಮಣನು

5. ಸುದೇಷಣಾ – ಸುದೇಷ್ಣಾ

ಇದಲ್ಲದೆ ಈ ಕಥಾರೂಪದಲ್ಲಿ ಬರುವ ಪಾತ್ರಗಳಿಗೆ ವಿಭಿನ್ನವಾದ ಹೆಸರು ಅಥವಾ ಬಿರುದುಗಳನ್ನು ಹೆಸರಿಸಿರುವುದನ್ನು ಕಾಣುತ್ತೇವೆ.

ISSN : 3048-7137

1. ಶಿವನಿಗೆ – ನಿಟಿಲಾಕ್ಷ

ಪನ್ನಗೇದ್ರ ಭೂಷಣ

ಕೈಲಾಸಾಧ್ಯಕ್ಷ

2. ದ್ರೋಣಾಚಾರ್ಯರಿಗೆ – ಬ್ರಾಹ್ಮಣಾಚಾರ್ಯ

ಕಟಕಾಧಿಪತಿ

ಕುಂಭಿಜಾತ

3. ಹಸ್ತಿನಾಪುರಕ್ಕೆ – ಗಜಪುರ

ಕರಿಪುರ

4. ಅರ್ಜುನನಿಗೆ – ಅನಿಮಿಷಾದಿಪ

5. ಕರ್ಣನಿಗೆ – ಮೀನುಗಳ್ಳ (ಬೆಸ್ತ)

6. ನಾಮಧ್ಯೆಯ – ಈ ಪದಕ್ಕೆ 'ನಾಮದೇಹ' ಎಂಬ ಪದವನ್ನು ವ್ಯಾಪಕವಾಗಿ ಬಳಸಿರುವುದು ಕಂಡುಬರುತ್ತದೆ.

ಹಾಗೆಯೇ ಈ ಬಯಲಾಟದ ಹಸ್ತಪ್ರತಿಯಲ್ಲಿ ನಮಗೆ ಒಂದೇ ಒಂದು ಆಂಗ್ಲ ಪದ ದೊರೆಯುತ್ತದೆ. ಅದು 'ಪ್ರವೀಟ್' (Private). ಪ್ರೈವೇಟ್ ಎಂಬ ಈ ಪದವನ್ನು ಅಭಿಮನ್ಯು 'ಪದ'ವನ್ನು ಹಾಡಬೇಕಾದ ಸಂದರ್ಭದಲ್ಲಿ ತಾನೊಬ್ಬನೆ ಹಾಡಬೇಕೆಂದು ಸೂಚನೆ ನೀಡುವುದರ ಸಲುವಾಗಿ ಪ್ರತಿಕಾರರು ಬಳಸಿರುವ ಪದ. ಇತ್ತೀಚೆಗೆ ಅಂದರೆ 1998ರಲ್ಲಿ ಪ್ರತಿಕೊಂಡಾಗ ಈ ಪದಇದರಲ್ಲಿ ಸೇರಿರಬಹುದು. ಅಂತೆಯೇ ಇಲ್ಲಿ ಎರಡುಗಾದೆ ಮಾತುಗಳು ಸಿಗುತ್ತವೆ.

1) ಗಿಣಿಯನ್ನು ಸಾಕಿ ಗಿಡುಗನಿಗೆ ಕೊಟ್ಟಂತೆ

2) ನಗುವವರ ಮುಂದೆ ಕಲ್ಲೆಡವಿದಂತೆ

ಸಂದರ್ಭೋಚಿತವಾಗಿ ಈ ಗಾದೆ ಮಾತುಗಳೂ ಸಹ ಬಳಕೆಗೊಂಡಿವೆ.

ಈ ಮೇಲಿನಂತೆ ಅಕ್ಷರ ವ್ಯತ್ಯಯಗಳಾಗಿರುವುದು ಪ್ರಾದೇಶಿಕತೆಯ ಜೊತೆಗೆ ಆಡುಮಾತಿನ ಪ್ರಾಮುಖ್ಯವನ್ನು ಸೂಚಿಸುತ್ತದೆ. ಕನ್ನಡ ವರ್ಣಮಾಲೆಯಲ್ಲಿ ಅವಶ್ಯವಿಲ್ಲದ ಮಹಾಪ್ರಾಣಗಳನ್ನೂ, ಹ ಕಾರ ಬಳಕೆಯನ್ನೂ ಸಂಸ್ಕೃತದ ಪ್ರಭಾವದಿಂದ ಹೇರಿರುವುದರಿಂದ ಮಾತನಾಡುವ ಕನ್ನಡಕ್ಕೂ, ಬರೆಯುವ ಕನ್ನಡಕ್ಕೂ ಅಜಗಜಾಂತರ ವ್ಯತ್ಯಾಸ ಉಂಟಾಗುವುದರ ಫಲವಿದು. ಇದನ್ನು ಪ್ರತಿ ಮಾಡಿರುವವರ ದೋಷಗಳೆಂದು

ಗಣಿಸಿದರೆ ತಪ್ಪಾಗುತ್ತದೆ. ಮೊದಲಿಗೆ ಭಾಷೆಯಲ್ಲಿನ ಈ ಅನಗತ್ಯಗಳನ್ನು ಹೊರಹಾಕುವ ಬಗೆಗೆ ಇಂದಿನ ವಿದ್ಯಾವಂತರು ಯೋಚಿಸಬೇಕಾದ ತುರ್ತಿದೆ. ಇನ್ನು ಕಥೆಯ ವಿಷಯಕ್ಕೆ ಸಂಬಂಧಿಸಿದಂತೆ ಅಭಿಮನ್ಯು ಚಕ್ರಬಿಂಬ ಕೋಟೆಯನ್ನು ಬೇಧಿಸಲು ಪ್ರಯತ್ನಿಸುವುದು ಪ್ರಮುಖ ಭಾಗವಾಗಿ ಹೊಂದಿದೆ ಈ ಬಯಲಾಟ. ಈ ಪೊತ್ತಿಗೆಯಲ್ಲಿ ಕೇವಲ ಹದಿನಾಲ್ಕು ವರ್ಷದ ವೀರನಾದ ಅಭಿಮನ್ಯುವಿನಿಂದ ದ್ರೋಣಾ, ಕರ್ಣ, ಸೈಂಧವಾದಿಗಳೇ ಸೋಲಿಸಲ್ಪಟ್ಟು, ದುರ್ಯೋಧನನ ಮಗನಾದ ಲಕ್ಷಣನು ಕೊಲ್ಲಲ್ಪಡುತ್ತಾನೆ. ಕೊನೆಗೆ ಮೋಸದಿಂದ ಅಭಿಮನ್ಯುವನ್ನು ವಧಿಸುತ್ತಾರೆ. ಈ ಅತಿರಥ ಮಹಾರಥರೆಲ್ಲ ಒಟ್ಟುಗೂಡಿ, ಬೇರೆಯ ಕಡೆಗೆ ಯುದ್ಧಕ್ಕೆ ಹೋಗಿದ್ದ ಕೃಷ್ಣಾರ್ಜುನರು ತಿರುಗಿ ಬಂದು ಸುದ್ಧಿಯನ್ನು ತಿಳಿದು, ತನ್ನ ಮಗನ ಸಾವಿಗೆ ಕಾರಣನಾದ ಸೈಂಧವನನ್ನು ಈ ದಿನ ಹೊತ್ತು ಮುಳುಗುವುದರೊಳಗೆ ಕೊಲ್ಲುತ್ತೇನೆಂದು ಶಪತ ಮಾಡಿದ ಅರ್ಜುನ ಕೃಷ್ಣನ ಸಹಾಯದಿಂದ ಹೊತ್ತು ಮುಳುಗಿದಂತೆ ಮಾಡಿ, ವಂಚನೆಯಿಂದ ಸೈಂಧವನನ್ನು ವಧಿಸುತ್ತಾನೆ. ಇಲ್ಲಿಗೆ ಆಟವು ಸಂಪೂರ್ಣವಾಗುತ್ತದೆ. ವೀರ ಅಭಿಮನ್ಯು ಕಾಳಗ ಅಥವಾ ಚಕ್ರಬಿಂಬ ಕೋಟೆಯು ಹೀಗೆ ಮುಗಿಯುತ್ತದೆ.

## ಉಪಸಂಹಾರ

ಮನರಂಜನಾ ಉದ್ದೇಶದಿಂದ ರಚನೆಗೊಂಡಿರುವ ಬಯಲಾಟಗಳಲ್ಲಿ ಪೌರಾಣಿಕ ಕಥೆಗಳೇ ಅಧಿಕವಾಗಿ ಕಾಣಿಸುತ್ತವೆ. ಅವುಗಳಲ್ಲಿ ರಾಮಾಯಣ, ಮಹಾಭಾರತಗಳದ್ದೇ ಸಿಂಹಪಾಲು. ಇವುಗಳಲ್ಲಿಯೂ ಸಹ ಪ್ರಾದೇಶಿಕವಾಗಿ ಅನೇಕ ಬದಲಾವಣೆಗಳಿರುತ್ತವೆ. ಅದು ಮೂಲಕಥೆ ಅಥವಾ ಭಾಷಿಕತೆಯಲ್ಲಿಯೂ ಕೂಡ. ಈ ಕಥಾಹಂದರಲ್ಲಿ ಆಯಾಯ ಪಾತ್ರಗಳನ್ನು ಪರಿಚಯಿಸುವಾಗ ಉದ್ದುದ್ದ ವಾಕ್ಯಗಳನ್ನು, ಮಹಾಪ್ರಾಣ, ಸಂಸ್ಕೃತ ಪದಗಳು, ಒತ್ತಕ್ಷರಗಳನ್ನು ಬಳಸಿ ಗಾಂಭೀರ್ಯತೆಯನ್ನು ಸೃಷ್ಟಿಸಲು ಪ್ರಯತ್ನಿಸಿರುವುದನ್ನು ಕಾಣುತ್ತೇವೆ. ಇದು ದೃಶ್ಯಕಾವ್ಯಗಳಲ್ಲಿ ಸಾಮಾನ್ಯವೆಂಬಂತೆ ಕಂಡುಬರುತ್ತದೆ. ಬಯಲಾಟಗಳಲ್ಲಿ ಕಂದ ಪದ್ಯಗಳಾಗಲಿ, ಬೇರಾವುದೇ ರೀತಿಯ ಕಠಿಣ ಮಟ್ಟುಗಳ ಹಾಡುಗಳು ಕಂಡುಬರುವುದಿಲ್ಲ. ಬದಲಿಗೆ ಎರಡು ಮೂರು ಸಾಲಿನ ಸಾಮಾನ್ಯ ವಾಕ್ಯಗಳು ಹಾಡಿಗೆ ಸೀಮಿತವಾಗಿವೆ. ಒಟ್ಟಿನಲ್ಲಿ ಜನ ಬಳಕೆಯಲ್ಲಿದ್ದ, ಸಾಮಾನ್ಯ ಜನರ ಬದುಕಿಗೆ ಹತ್ತಿರವಾದ ಭಾಷೆ, ಮಾರ್ಗಗಳನ್ನು ಬಳಸುವ ಮೂಲಕ ಒಂದು ದೃಶ್ಯ ಕಾವ್ಯವನ್ನು ಸಮರ್ಥವಾಗಿ ನಿರ್ವಹಿಸಿ ನೋಡುಗರಿಗೆ ಸಂತೋಷವನ್ನುಂಟುಮಾಡುವಲ್ಲಿ ಬಯಲಾಟಗಳು ಸಮರ್ಥವಾಗಿರುವುದು ನಿಜ. ಇಂದಿಗೂ ಅವು ಜೀವಂತವಾಗಿರುವುದೇ ಇದಕ್ಕೆ ಸಾಕ್ಷಿ. ಇಲ್ಲಿಯ ಚಕ್ರಬಿಂಬ ಕೋಟೆ ಅಥವಾ ವೀರಅಭಿಮನ್ಯು ಕಾಳಗ ಇದಕ್ಕೆ ಹೊರತೇನಲ್ಲ.

ISSN : 3048-7137

## ಆಕರ ಗ್ರಂಥಗಳು


1. ತಳುಕಿನ ದೊಡ್ಡ ಸುಬ್ಬಣ್ಣ ವಿರಚಿತ ವೀರಅಭಿಮನ್ಯು ಕಾಳಗ ಅಥವಾ ಚಕ್ರಬಿಂಬ ಕೋಟೆ : ಪ್ರತಿಕಾರರು, ಪಾಪಣ್ಣ ಪೂಜಾರಿ, ಮಲೆತುಂಬರಗುಡ್ಡೆ
2. ಉತ್ತರಕರ್ನಾಟಕದ ಬಯಲಾಟಗಳು, ಬಿ.ಎಂ. ಮಲಶೆಟ್ಟಿ, ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ, ಧಾರವಾಡ ವಿಶ್ವವಿದ್ಯಾಲಯ, 1978
3. ಕರ್ನಾಟಕದ ಜನಪದ ಆಚರಣೆಗಳು, ಸ.ಚಿ. ರಮೇಶ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010
4. ಜಾನಪದ ವ್ಯಾಸಂಗ, ಬಸವರಾಜ ಪೋಲೀಸ ಪಾಟೀಲ, ಅಮರ ಪ್ರಕಾಶನ, ಗುಲಬರ್ಗಾ, 1998
5. ಶರಣರ ಬಯಲಾಟಗಳು, ವೀರಣ್ಣದಂಡೆ, ಜಯಶ್ರೀ ದಂಡೆ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ, 2012